# ವರ್ತಮಾನದಲ್ಲಿ ಭಕ್ತಿಮಾರ್ಗಗಳ ಪ್ರಸ್ತುತತೆ

(ಕನ್ನಡ ಸಾಹಿತ್ಯವನ್ನು ಅನುಲಕ್ಷಿಸಿ)



ಪ್ರಧಾನ ಸಂಪಾದಕರು

ಡಾ. ಎಸ್. ಟಿ. ಮೇರವಾಡೆ

ಸಂಪಾದಕರು

ಪ್ರೊ. ಬಿ. ಬಿ. ಡೆಂಗನವರ    ಡಾ. ಆರ್. ವಿ. ಪಾಟೀಲ

ಸೌಮ್ಯ ಪ್ರಕಾಶನ, ವಿಜಯಪುರ

Scanned by CamScanner

# ಪರಿವಿಡಿ


೧. ಪ್ರಾಮಾಣಿಕ ಬದುಕಿನ ಆಶಯವೇ ಭಕ್ತಿಮಾರ್ಗದ ಪ್ರಸ್ತುತತೆ ೧

● ಡಾ. ವಿ. ಎಸ್. ಮಾಳಿ

೨. ಸರ್ವಜ್ಞ ಮತ್ತು ಕಬೀರ ೮

● ಡಾ. ಎಸ್. ಟಿ. ಮೇರವಾಡೆ

೩. ಹೆಳವನಕಟ್ಟೆ ಗಿರಿಯಮ್ಮನ ಭಕ್ತಿಮಾರ್ಗದ ಶೋಧದ ನೆಲೆ ೧೧

● ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ

೪. ಭಕ್ತಿ ಬಿನ್ನಹ ದಂಡಕ : ಒಂದು ವಿವೇಚನೆ ೧೬

● ಡಾ. ಆರ್. ವಿ. ಪಾಟೀಲ

೫. ಜೈನ ಸಾಹಿತ್ಯದಲ್ಲಿ ಧರ್ಮ ಮತ್ತು ಭಕ್ತಿ ೨೨

● ಪ್ರೊ. ಬಿ. ಬಿ. ಡೆಂಗನವರ

೬. ವಚನಕಾರರ ಭಕ್ತಿ ಮಾರ್ಗ ಮತ್ತು ಕನ್ನಡ ಸಾಹಿತ್ಯ ಸಮೃದ್ಧಿ ಹಾಗೂ ವರ್ತಮಾನದ ಸಂದರ್ಭ ೨೮

● ಸುರೇಶ ಅಳಗುಂಡಿ

೭. ಬಸವಣ್ಣನವರ ವಚನಗಳಲ್ಲಿ ಭಕ್ತಿ ೩೩

● ಡಾ. ಇಂದುಬಾಯಿ ಅಂಬಣ್ಣ

೮. ವೀರಶೈವ ಮಾರ್ಗ : ನೀತಿ ಬೋಧನೆಯ ಮೂಲಕ ಭಕ್ತಿ ಪ್ರತಿಪಾದನೆ ೩೭

● ಡಾ. ಅಜ್ಜಪ್ಪ ಜಿ. ಈ.

೯. ಜಾತಿಸೂಚಕ ವಚನಕಾರರ ಕುರಿತ ಇಂದಿನ ಚರ್ಚೆಗಳ ಸ್ವರೂಪ ಹಾಗೂ ಸಮಸ್ಯೆಗಳು ೪೧

● ಡಾ. ವೀಣಾ. ಈ.

೧೦. ಬಸವಣ್ಣನವರ ಪರಿವರ್ತನಾ ಮನೋಧರ್ಮ ಅಂದು ಇಂದು ೪೬

● ಪ್ರೊ. ಲಕ್ಷ್ಮೀ ಮೋರೆ

೧೧. ಭಕ್ತಿ ಸಾಹಿತ್ಯಯುಗದ ಪರಂಪರೆಯ ಪ್ರಸ್ತುತತೆ ಮತ್ತು ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ೪೯

● ಡಾ. ವೈ. ಚಂದ್ರಬಾಬು




Scanned by CamScanner

# ಜೈನ ಸಾಹಿತ್ಯದಲ್ಲಿ ಧರ್ಮ ಮತ್ತು ಭಕ್ತಿ

• ಪ್ರೊ. ಬಿ. ಬಿ. ಡೆಂಗನವರ

ಪ್ರತಿಯೊಂದು ಧರ್ಮವು ಜೀವ-ಜಗತ್ತು ಹಾಗೂ ಈಶ್ವರ ಎಂಬ ವಿಷಯಗಳ ಕುರಿತಾಗಿ ತನ್ನದೇ ಆದ ಸಿದ್ಧಾಂತಗಳನ್ನು ಹೊಂದಿರುತ್ತದೆ. ಅದೇ ರೀತಿ ವ್ಯಕ್ತಿ ಜೀವನಕ್ಕೆ ಸಂಬಂಧಿಸಿದ ಕೆಲವು ತತ್ತ್ವ ಹಾಗೂ ಆಚರಣೆಗಳ ಬಗೆಗೂ ಕೆಲವು ತಿಳುವಳಿಕೆಗಳು ಅಲ್ಲಿರುತ್ತವೆ. ಇಂಥ ಮೂಲಭೂತ ತಿಳುವಳಿಕೆಗಳ ಒಟ್ಟು ಮೊತ್ತವನ್ನೇ ನಾವು ಸಾಮಾನ್ಯ ಅರ್ಥದಲ್ಲಿ ಧರ್ಮ ಎಂದು ಕರೆಯುತ್ತೇವೆ, ಧರ್ಮವೆಂಬುದೊಂದು ಜೀವನ ವಿಧಾನ ಧರ್ಮದ ಮೂಲಾಧಾರಗಳು ತತ್ತ್ವಗಳು ಮನುಷ್ಯ ಇವುಗಳನ್ನು ತನ್ನ ಬುದ್ಧಿಬಲದಿಂದ ಕಟ್ಟಿಕೊಂಡಿರುತ್ತಾನೆ. ಸೂಕ್ಷ್ಮವಾಗಿ ನೋಡಿದರೆ ಈ ಜೀವ-ಜಗತ್ತು-ಈಶ್ವರ ಎಂಬ ಈ ಮೂರು ನೆಲೆಗಳು ಇಡೀ ವಿಶ್ವ ಜೀವನವನ್ನೆಲ್ಲ ಒಳಗೊಂಡಿವೆಯೆನ್ನಬಹುದು. ಇವುಗಳ ಕುರಿತಾಗಿ ಜೈನಧರ್ಮವು ತನ್ನದೇ ಆದ ವ್ಯಾಪಕ ತಿಳುವಳಿಕೆಗಳನ್ನು ಹೊಂದಿದ್ದು ಜೈನ ಸಿದ್ಧಾಂತದಲ್ಲಿ ಭಕ್ತಿಮಾರ್ಗ ಕುರಿತಾಗಿರುವ ವಿಚಾರಗಳನ್ನು ಮೆಲಕು ಹಾಕಲಾಗುವುದು. ಕರ್ನಾಟಕದ ಅರಸರು ಜೈನಧರ್ಮದ ಅನುಯಾಯಿಗಳಾಗಿದ್ದು, ಈ ಧರ್ಮದ ವಿಕಾಸಕ್ಕಾಗಿ ತುಂಬ ಹೆಣಗಾಡಿದ್ದಾರೆ. ಅಂತಹ ರಾಜವಂಶಗಳಲ್ಲಿ ಗಂಗರಾಜರು ಪ್ರಮುಖರು. ಗಂಗರಸನು ಕನ್ನಡನಾಡನ್ನು ಮುನ್ನೂರು ವರ್ಷಗಳ ವರೆಗೆ ವೈಭವದಿಂದ ಆಳಿದನು. ಇವರು ತಮ್ಮ ಒಂದು ಶಾಖೆಯನ್ನು ಕಲಿಂಗ ರಾಜ್ಯದಲ್ಲಿಯೂ ಇನ್ನೊಂದು ಶಾಖೆಯನ್ನು ನೇಪಾಳದಲ್ಲಿಯೂ ಸ್ಥಾಪಿಸಿ ಕನ್ನಡ ನಾಡಿಗೂ ಜೈನಧರ್ಮಕ್ಕೂ ಕೀರ್ತಿಯನ್ನು ಗಳಿಸಿಕೊಟ್ಟರು. ಗಂಗಮಾರಸಿಂಹನ ಮಂತ್ರಿಯಾದ ಚಾವುಂಡರಾಯ ಮಾರಸಿಂಹನ ತರುವಾಯ ಅವನ ಮಗನಾದ ರಾಜಮಲ್ಲನ ಮಂತ್ರಿಯೂ, ಸೇನಾಪತಿಯೂ ಆಗಿ ಚಾವುಂಡರಾನು ಕೆಲಸ ಮಾಡಿದನು. ಶ್ರವಣ ಬೆಳಗೊಳದ ಶಿಲಾ ಲೇಖನದಲ್ಲಿ ಚಾವುಂಡರಾನಿಗೆ 'ಸಮರಧುರಂದರ'. ವೀರಮಾರ್ತಾಂಡ' ರಣರಂಗಸಿಂಹ, ತ್ರಿಭುವನ ವೀರ' ಎಂದು ಕೊಂಡಾಡಲಾಗಿದೆ. ಇವನಿಗೆ ಹಿರಿಯರು ಗೊಮ್ಮಟನೆಂದು ಕರೆಯುತ್ತಿದ್ದರು. ಅದರಿಂದ ಶ್ರವಣಬೆಳ್ಗೊಳದ ವಿಂಧ್ಯಗಿರಿಯ



Scanned by CamScanner

ಮೇಲೆ ಇವನು ಪ್ರತಿಷ್ಠಾಪಿಸಿದ ಬಾಹುಬಲಿಯ ಲೋಕೋತ್ತರ ಮೂರ್ತಿಗೆ "ಗೋಮ್ಮಟೇಶ್ವರ" ಎಂದು ಹೆಸರಾಯಿತು. ಚಾವುಂಡರಾಯನು ಕನ್ನಡದಲ್ಲಿ "ತ್ರಿಷಷ್ಠಿ ಲಕ್ಷಣ" ಮಹಾ ಪುರಾಣ ಬರೆದಿದ್ದಾನೆ. ಇದಕ್ಕೆ ಚಾವುಂಡರಾಯ ಪುರಾಣವೆಂದೂ ಕರೆಯುತ್ತಾರೆ. ಇವನ ವ್ಯಕ್ತಿತ್ವವು ಶ್ರವಣಬೆಳಗೊಳದ ಗೋಮ್ಮಟೇಶ್ವರನಂತೆಯೇ ಉನ್ನತವಾಗಿದೆ. ಕರ್ನಾಟಕದಲ್ಲಿ ಈತ ಮಾಡಿದ ಕಾರ್ಯಗಳು ಜೈನಧರ್ಮದ ವಿಕಾಸಕ್ಕೆ ನೆರವಾಗುವಂತೆ ಇವೆ, ಗಂಗರಾಜರು ಸಾವಿರಾರು ವರ್ಷ ಕರ್ನಾಟಕದಲ್ಲಿ ಜೈನಧರ್ಮಕ್ಕೆ ಆಶ್ರಯದಾರತಾಗಿದ್ದರು. ಚಾಲುಕ್ಯ ರಾಜಮನೆತನವೂ ಕೂಡ ಕರ್ನಾಟಕದಲ್ಲಿ ಜೈನ ಧರ್ಮದ ಸೇವೆಗೆ ಸಹಾಯಕವಾಗಿ ನಿಂತಿತು. ಇವರಲ್ಲಿ ಎರಡನೆಯ ಪುಲಕೇಶಿ ಆಸ್ಥಾನ ಕವಿ ಜೈನಾಚಾರ್ಯನಾದ ರವಿಕೀರ್ತಿಯು ಒಂದು ಜೈನ ಮಂದಿರವನ್ನು ಕಟ್ಟಿಸಿದನು. ಈ ಮನೆತನದ ಮೊದಲನೆಯ ವಿಕ್ರಮಾದಿತ್ಯನ ಮಗನಾದ ವಿನಯಾದಿತ್ಯನ ಆಸ್ಥಾನದಲ್ಲಿ ಜೈನ ಪಂಡಿತನಾದ ನಿರ್ವಿದ್ಯ ದೇವನೆಂಬುವವನಿದ್ದನು. ಕದಂಬ ಮನೆತನದಿಂದ ಬಂದ ಆರನೆ ವಿಕ್ರಮಾದಿತ್ಯನ ಮಡದಿ ಚಾಕಲದೇವಿಯು ಅನೇಕ ಜೈನ ಮಂದಿರಗಳನ್ನು ಕಟ್ಟಿಸಿದಳು. ಹೀಗೆ ಚಾಲುಕ್ಯರ ಆಪ್ತತೆ ಜೈನಮನೆತನಗಳೊಡನೆ ಇದ್ದುದರಿಂದಲೇ ಈ ರಾಜ ಮನೆತನದಲ್ಲಿಯ ಅರಸರು 'ಆದಿ ಪುರಾಣವನ್ನು ರಚಿಸಿದ ಆದಿ ಕವಿಯೂ ಮಹಾಕವಿಯೂ ಆದ ಪಂಪನಿಗೆ ಆಶ್ರಯವಿತ್ತರು. ಕಲ್ಯಾಣ ಚಾಲುಕ್ಯರು ಜೈನಧರ್ಮದ ಪೋಷಕರು ಎಂಬುದಕ್ಕೆ ಬೆಳಗಾವಿ, ತೇರದಾಳ, ರಾಯಭಾಗಗಳಲ್ಲಿ ದೊರೆತ ಶಿಲಾ ಶಾಸನಗಳೇ ಸಾಕ್ಷಿಯಾಗಿವೆ. ಅಜೀತಪುರಾಣದ ಕರ್ತೃವಾದ ರನ್ನನಿಗೆ ಕವಿಚಕ್ರವರ್ತಿ ಎಂಬು ಬಿರುದನ್ನು ಕೊಟ್ಟು ಗೌರವಿಸಿದವನು ಚಾಲುಕ್ಯ ದೊರೆಯಾದ ತೈಲಪನಬೆಂಬುದು ತಿಳಿದುಬರುತ್ತದೆ. ರಾಷ್ಟ್ರಕೂಟ ಆಳ್ವಿಕೆಯೂ ಸಹ ಕರ್ನಾಟಕದಲ್ಲಿ ಜೈನ ಧರ್ಮದ ಏಳ್ಗೆಗೆ ತುಂಬ ಸಹಾಯ ಸಲ್ಲಿಸಿತು. ಈ ಮನೆತನದ ಮೊದಲನೆಯ ಅಮೋಘವರ್ಷನು ಜೈನಧರ್ಮ ಅನುಯಾಯಿಯಾಗಿದ್ದನು, ಇವನ ಗುರು ಜಿನಸೇನಾಚಾರ್ಯನು, ಸ್ವತಃ ಅಮೋಘವರ್ಷನು ಜಿನಧರ್ಮವನ್ನು ಕುರಿತು 'ಪ್ರಶ್ನೋತ್ತರ ರತ್ನಮಾಲಿಕಾ; ಎಂಬ ಗ್ರಂಥವನ್ನು ರಚಿಸಿದ್ದಾನೆ. ನೃಪತುಂಗನಿಗೆ ಅತಿಶಯ ಧವಳ ಎಂಬ ಬಿರುದಿತ್ತು. ಇತನಿಂದ ಜೈನ ಧರ್ಮಕ್ಕೆ ತುಂಬಾ ಉಪಕಾರವಾಗಿದೆ.

ಹೊಯ್ಸಳ ರಾಜಮನೆತನದ ಮೂಲ ಪುರುಷನಾದ ಹೊಯ್ಸಳನಿಗೆ ಜೈನಗುರುವಾದ ಸುದತ್ತಾಚಾರ್ಯನೇ ರಾಜಗುರುವೂ ವಿದ್ಯಾ ಗುರುವೂ ಆಗಿದ್ದನು. ಈ ಮೆನತನದ ವಿನಯಾದಿತ್ಯನು ಜೈನಾಚಾರ್ಯನಾದ ಶಾಂತಿದೇವ ಮುನಿಯ ಆಶೀರ್ವಾದದಿಂದ ಗಂಗವಾಡಿಯ ೯೬೦೦೦ ಮಹಾಮಂಡಲೇಶ್ವರನಾದ ಜೈನಧರ್ಮದ ಸಂರಕ್ಷಕ. ಇವನು ಅನೇಕ ಜಿನಮಂದಿಗಳನ್ನು ಕೆರೆಗಳನ್ನೂ



Scanned by CamScanner

ಕಟ್ಟಿಸಿದನು. ಈ ವಿನಯಾದಿತ್ಯನ ಮಗನಾದ ಎರೆಯಂಗನು ತನ್ನ ಗುರುವಾದ ಗೋಪನಂದಿ ಆಚಾರ್ಯನಿಗಾಗಿ ಶ್ರವಣಬೆಳಗೋಳದಲ್ಲಿಯ ಚಂದ್ರಗಿರಿಯ ಮೇಲಿನ ಬಸದಿಗಳನ್ನು ಜೀರ್ಣೋದ್ಧಾರ ಮಾಂಡಲಿಕನೆಂದು ಕೆಲವು ಊರುಗಳನ್ನು ದಾನವಾಗಿ ಕೊಟ್ಟನು, ಆದರೆ ತಂದೆಯ ತರುವಾಯ ಒಂದನೇ ಬಲ್ಲಾಳನೇ ಹೊಯ್ಸಳ ರಾಜ್ಯಾಧಿಪತ್ಯವನ್ನು ಸ್ವೀಕರಿಸಿದನು. ಈ ಬಲ್ಲಾಳ ದೊರೆಯನ್ನು ಒಂದು ಅಸಾಧ್ಯ ರೋಗದಿಂದ ಜೈನಾಚಾರ್ಯನಾದ ಚಾರುಕೀರ್ತಿಯು ಉಳಿಸಿದನು. ಚಾರು ಕೀರ್ತಿಗೆ 'ಬಲ್ಲಾಳ ಜೀವರಕ್ಷಕ' ಎಂಬ ಬಿರುದು ಇತ್ತು. ಧರ್ಮ–ಕಾವ್ಯಧರ್ಮದ ಸಮನ್ವಯ ಪರಿಕಲ್ಪನೆಯನ್ನು ಮೂಡಿಸಿಕೊಟ್ಟವರೇ ಜೈನ ಕವಿಗಳೆಂಬುದು ನಿಸ್ಸಂದೇಹ ಜೈನರ ಕಾವ್ಯಗಳು 'ಧರ್ಮ ನಿಮಿರ್ಚುವುದರಿಂ ಸಂಸಾರ ಸಾರೋದಯ' ಗಳೆನಿಸಿದವು. ರತ್ನಾಕರ ವರ್ಣಿ ತನ್ನ ಭರತೇಶ ವೈಭವವನ್ನು 'ಕೇಳಿರೋ ನೀವು ಭವ್ಯರು' ಎಂದು ತನ್ನ ಕಾವ್ಯವನ್ನು ಉಸುರಿದ್ದಾನೆ. ಚಾವುಂಡರಾಯ ತನ್ನ ಕೃತಿಯನ್ನು 'ಭವ್ಯಕೊಟಿಗೆ ಅರಿಪಿದೆ' ಎಂದಿದ್ದಾನೆ. ಸಾಮಾನ್ಯವಾಗಿ ಎಲ್ಲ ಜೈನ ಕವಿಗಳೂ ಕಾವ್ಯದೊಳಗೆ ಧರ್ಮವನ್ನು ಹೇಳಲೇಬೇಕೆಂಬ ವಿಚಾರ, ಧರ್ಮದಿಂದೊಡಗೂಡಿದ ಕಾವ್ಯಮಾರ್ಗದಿಂದ ಮುಕ್ತಿಯನ್ನು ಪಡೆಯಬಹುದೆಂಬ ಆಶಯವಾಗಿದೆ. ಪಂಪ ತನ್ನ ಆದಿ ಪುರಾಣದಲ್ಲಿ– 'ಇದುವೆ ಸುಕವಿ ಪ್ರಮೋದ, ಪ್ರದಮಿದುವೆ ಸಮಸ್ತ ಭವ್ಯಲೋಕ ಪ್ರಮುದ, ಪ್ರದಮೆನೆಲ್ದುದಿ ಪುರಾಣ, ದೊಳರಿವುದು ಕಾವ್ಯ ಧರ್ಮಮಂ ಧರ್ಮಮುಂ'

ಪಂಪನು ತನ್ನ ಆದಿಪುರಾಣದಲ್ಲಿ ಧರ್ಮವನ್ನು ಕಾವ್ಯಧರ್ಮವನ್ನೂ ಮೇಳವಿಸಿದ್ದಾನೆ, ಇದರಲ್ಲಿ ಜೈನಧರ್ಮವನ್ನು ನಿರೂಪಿಸಿಲಾಗಿದೆ. ಇಲ್ಲಿ ಮುಖ್ಯವಾಗಿ ಮೂರು ವಿಷಯಗಳು ಮೊದಲನೆಯ ತೀರ್ಥಂಕರ ಆದಿನಾಥನ ಭವಾವಳಿಗಳು, ಪಂಚಕಲ್ಯಾಣಗಳು, ಭರತ ಹಾಗೂ ಬಾಹುಬಲಿಯ ಪ್ರಸಂಗವನ್ನು ನಿರೂಪಿಸಲಾಗಿದೆ. ಅಭ್ಯುದಯ ಪರವಾದ ಭವ್ಯ ಜೀವವೊಂದು ತನ್ನ ಧ್ಯೇಯ ಸಾಧನೆಯಲ್ಲಿ ಮುಂಬರಿದು ಸಿದ್ಧಿಪಡೆಯುವುದು, ಆದಿ ಪುರಾಣದಲ್ಲಿ ಕಾಣುತ್ತೇವೆ. ಆದಿಪುರಾಣಕ್ಕೆ ಆಕರವಾದ ಜಿನಸೇನಾಚಾರ್ಯರ "ಮಹಾ ಪುರಾಣ" ಒಂದು ಮತೀಯ ಗ್ರಂಥವಾಗಿ ಉಳಿದರೆ ಪಂಪನ 'ಆದಿಪುರಾಣ' ಕೇವಲ ಮತೀಯ ಗ್ರಂಥವಾಗಿರದೆ ಕಾವ್ಯಧರ್ಮ ಮತ್ತು ಧರ್ಮಗಳೆರಡಕ್ಕೂ ಮಹತ್ವಕೊಟ್ಟು ಶಾಶ್ವತ ಮೌಲ್ಯಗಳನ್ನು ಪ್ರತಿಪಾದಿಸಿ ಮೇರು ಕೃತಿಯನ್ನಾಗಿ ಮಾಡಿರುವುದು ಪಂಪನ ವೈಶಿಷ್ಟ್ಯ.

ಆದಿ ಪುರಾಣದ ಕಥಾವಸ್ತು ಆದಿ ತೀರ್ಥಂಕರನಾದ ವೃಷಭದೇವ ಮತ್ತು ಅವರ ಮಕ್ಕಳಾದ ಭರತ ಬಾಹುಬಲಿಯರ ವಿಷಯವನ್ನು ಕುರಿತಾಗಿದೆ. ಪಂಪ ಇಲ್ಲಿ ಕಥಾವಸ್ತುವನ್ನು ಪ್ರತಿಮಾ ರೂಪದಲ್ಲಿ ನಿರೂಪಿಸಿದ್ದಾನೆ. ಧರ್ಮದೃಷ್ಟಿ ಭಗವದ್ಭಕ್ತಿ, ಋಷಿದರ್ಶನಗಳಿಂದ ತುಂಬಿಕೊಂಡಿರುವ ಒಂದು ದಿವ್ಯದರ್ಶನವಾಗಿದೆ



Scanned by CamScanner

ಈ ಮಹಾಕಾವ್ಯ, ಸಮ್ಯಕ್‌ದ್ಯಾನ, ಸಮ್ಯಕ್‌ದರ್ಶನ, ಸಮ್ಯಕ್ ಚಾರಿತ್ರ್ಯಗಳಲ್ಲಿ ನಂಬಿಕೆ ಇಟ್ಟು ಕಾವ್ಯದ ಮೂಲಕವೋ ತಾನು ಸಮಾಜಕ್ಕೆ ಕೊಡಬೇಕಾದ ಕೊಡುಗೆಯನ್ನು ಕೊಟ್ಟಿದ್ದಾನೆ. ಆತ್ಮ ಸಾಧನೆಗೆ ಭವ್ಯ ಅಭವ್ಯ, ಅಸನಭವ್ಯ ಮತ್ತು ದೂರ ಭವ್ಯವೆಂಬ ನಾಲ್ಕು ವಿಧಗಳಿವೆ. ಭವ್ಯಾತ್ಮರು ಸಾಧನೆಯಲ್ಲಿ ಒಂದು ಹಂತವನ್ನು ಮುಟ್ಟಿ ಸಮ್ಯಕ್ತ ಜೀವಿಗಳಾಗುತ್ತಾರೆ ಎಂದಿದ್ದಾನೆ ಕವಿ ಪಂಪ.

ಕನ್ನಡ ರತ್ನತ್ರಯ ಕವಿಗಳಲ್ಲಿ ಒಬ್ಬನಾದ ಪೊನ್ನಕವಿ ಕ್ರಿ.ಶ. ೯೩೬ ರಿಂದ ೯೬೮ರ ವರೆಗೆ ರಾಜ್ಯವಾಳಿದ ರಾಷ್ಟ್ರಕೂಟರ ಮೂರನೆಯ ಕೃಷ್ಣನ ಆಸ್ಥಾನ ಕವಿಯಾಗಿದ್ದುದು ತಿಳಿದು ಬರುತ್ತದೆ. ಇವನು ಉಭಯ ಭಾಷಾ ಪಂಡಿತನಾಗಿದ್ದನು. ಕನ್ನಡ ಮತ್ತು ಸಂಸ್ಕೃತ ಕವಿ ಈತ. ಪೊನ್ನಕವಿ ತನ್ನ ಧಾರ್ಮಿಕ ಕಾವ್ಯವಾದ ಶಾಂತಿ ಪುರಾಣದಲ್ಲಿ. ಭುವನದ ಕನ್ನಡ ಸಕ್ಕದ, ಗವಿಗಳ್ ಸಲೆ ಸಾಲೆ ಸೋಲೆ ಸವಣಂಗಿತ್ತಂ, ಸವಿವೇಕ ಮುಭಯ ಕವಿ ಚ, ಕ್ರವರ್ತಿವೆಸರಂ ನಿಜಾಹಿತೋಷಣ್ಣಂ ಕೃಷ್ಣಂ. ಎಂದು ಹೇಳಿಕೊಂಡಿರುವುದರಿಂದ ರಾಷ್ಟ್ರಕೂಟರ ಕೃಷ್ಣನ ಆ ಸ್ಥಾನದಲ್ಲಿದ್ದನೆಂಬುದು ಖಚಿತ.

ಶಾಂತಿ ಪುರಾಣ ಒಂದು ಧಾರ್ಮಿಕ ಕಾವ್ಯ ಇದರಲ್ಲಿ ಧರ್ಮ ಮತ್ತು ಕಾವ್ಯಧರ್ಮಗಳನ್ನು ಮೇಳವಿಸಿದ್ದಾನೆ. ಶಾಂತಿಪುರಾಣವನ್ನು ಕವಿ ಪೊನ್ನ ಪುರಾಣಚೂಡಾಮಣಿ ಎಂದು ಕರೆದುಕೊಂಡಿದ್ದಾನೆ. ಇಲ್ಲಿಯ ಕಥಾವಸ್ತು ಹದಿನಾರನೆಯ ತೀರ್ಥಂಕರನೂ ಐದನೆಯ ಚಕ್ರವರ್ತಿಯೂ ಆದ ಶಾಂತಿನಾಥನ ಕಥೆಯನ್ನು ಮೊದಲ ಒಂಬತ್ತು ಆಶ್ವಾಸಗಳಲ್ಲಿ ಶ್ರೀಷೇಣ, ಭೋಗ ಭೂಮಿಜ, ಶ್ರೀದೇವ, ಅಮಿತತೇಜ, ಮಣಿಚೂಳ, ಅಪರಾಜಿತ, ಅಚ್ಯುತೇಂದ್ರ, ವಜ್ರಾಯುಧ, ಅಹಮಿಂದ್ರ, ಮೇಘರಥ ಮತ್ತು ಮಹೇಂದ್ರ ಎಂಬ ಹನ್ನೊಂದು ಜನ್ಮಗಳ ಕಥೆಯನ್ನು ಹೇಳಲಾಗಿದೆ. ಶಾಂತಿನಾಥನ ಕಥೆಗಿಂತ ಅವನ ಭವಾವಳಿಗಳ ವಿಚಾರವೇ ಹೆಚ್ಚಾಗಿ ವರ್ಣಿತವಾಗಿರುವುದರಿಂದ ಕಾವ್ಯದಲ್ಲಿ ಕಾವ್ಯ ಧರ್ಮ ಹೊರಹೊಮ್ಮಲು ಅಡ್ಡಿಯಾದಂತೆ ತೋರುತ್ತದೆ. ನಾಗಚಂದ್ರನು ಮಲ್ಲಿನಾಥ ಪುರಾಣಂ ಎಂಬ ಧರ್ಮ ಗ್ರಂಥವನ್ನು ರಚಿಸಿದ್ದಾನೆ. ಹತ್ತೊಂಬತ್ತನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತ್ರೆ ಇದರಲ್ಲಿ ನಿರೂಪಿತವಾಗಿದೆ. ಹದಿನಾಲ್ಕು ಆಶ್ವಾಸಗಳಿವೆ ಇದೊಂದು ಜೈನ ಪುರಾಣವಾಗಿದೆ. ಕಚ್ಛವತಿ ಎಂಬುದೊಂದು ದೇಶ ಅದರ ರಾಜಧಾನ ವೀತಶೋಕಪುರ ವೈಶ್ರವಣ ಅಲ್ಲಿಯ ರಾಜ ಸುಖವಾಗಿ ರಾಜ್ಯವಾಳುತ್ತಿದ್ದ ಹೀಗಿರಲು ಒಂದು ದಿನ ಆಲದ ಮರವೊಂದಕ್ಕೆ ಸಿಡಿಲು ಬಡಿದು ಮರ ನೆಲಕ್ಕುರುಳಿತು. ಇದನ್ನು ನೋಡಿದ ವೈಶ್ರವಣನಿಗೆ ದೇಹದ ಅಸಾರತೆಯ ಅರಿವುಂಟಾಯಿತು. ವೈರಾಗ್ಯ ಹೊಂದಿ ಮಗನಿಗೆ ರಾಜ್ಯಪಟ್ಟ ಕಟ್ಟಿ ನಾಗಮತಿಗಳಲ್ಲಿ ದೀಕ್ಷೆಯನ್ನು ಸ್ವೀಕರಿಸಿ ತಪಸ್ಸು ಮಾಡಿ ಅಪರಾಜಿತ ವಿಮಾನದಲ್ಲಿ ಅಹಮಿಂದ್ರನಾದನು. ಅನಂತರದಲ್ಲಿ ಮುಂದಿನ ಜನ್ಮದಲ್ಲಿ ಮಿಥಿಲಾಪುರದಲ್ಲಿ ಮಲ್ಲಿನಾಥ ಎಂಬ ಹೆಸರಿನಿಂದ



Scanned by CamScanner

ರಾಜಕುಮಾರನಾಗಿ ಜನಿಸಿದನು. ಅನಂತರ ವೈರಾಗ್ಯ ಹೊಂದಿ ಪರಿನಿಷ್ಕ್ರಮಣದಿಂದ ಕೇವಲ ಜ್ಞಾನವನ್ನು ಪಡೆದದ್ದು ಮಲ್ಲಿನಾಥ ಪುರಾಣದ ಕಥೆಯಾಗಿದೆ. 'ಸಿಡಿಲೆಂಬ ಜವನ ಕೊಡಲಿಯ, ಕಡುವೊಯ್ಲಿಂ ನೆಗೆದ ಬೇರ್ಗಳೊಡನೆ ನೆಲಂಬಾ, ಯ್ದಿಡೆ ಬೆಟ್ಟು ಕಡೆವತೆರದಿಂ, ಕೆಡೆದಾಲಮನಿದಿರೊಳವನಿ ಪಾಲಂ ಕಂಡಂ'. ಸಿಡಿಲೆಂಬ ಜವನಕೊಡಲಿಯ ಪೆಟ್ಟನಿಂದ ಬೇರು ಸಹಿತವಾಗಿ ನೆಲವು ಬಾಯ್ಬಿಡುವಂತೆ ಆಲದ ಮರವು ನೆಲಕ್ಕೆ ಉರುಳಿತು. ಇದನ್ನು ನೋಡಿದ ಮಲ್ಲಿನಾಥನಿಗೆ ಮನಸ್ಸಿನಲ್ಲಿ ಪರಿವರ್ತನೆಯಾಗಿ ಮರುದಿನದ ಮುಂಜಾನೆ ಎಂದಿನಂತಿರದೆ ಬೇರೆಯಾಗಿ ಕಂಡಿತು. ಮೂಡಣಸಂಜೆಕೆಂದಳಿರ ಕಾವಣದಂತಿರೆ ಚಂದ್ರಮಂಡಳಂ, ಬಾಡಿದ ಮಾಧವೀಯ ಮಧುರಮಂಜರಿಯಂತಿರೆ ತಾರಕಾಳಿನೀ, ರೋಡಿ ಕಳಲ್ದು ಬೀಳ್ವ ಕಳಿವೂಗೆಣೆಯಾಗಿರ ತಣ್ಣನಪ್ಪೆಲರ್, ತೀಡೆ ತಪೋವನಂಬೊಲತಿ ಪಾವನ ಮಾಯ್ತು ನಭಂ ಪ್ರಭಾತದೊಳ್.

ಮೂಡಣ ದಿಕ್ಕಿನಲ್ಲಿ ಸಂಜೆಯ ಕೆಂಪು ಪಲ್ಲವಗಳಿಂದ ಮಾಡಿದ ಮಂಟಪದಂತೆಯೂ ಚಂದ್ರಮಂಡಲವು ಬಾಡಿಹೋದ ಮಾಧವೀ ಪುಷ್ಪ ಮಂಜರಿಯಂತೆಯೂ ನಕ್ಷತ್ರಗಳು ಸಮೂಹದಿಂದ ಬೇರಾಗಿ ಜಾರಿ ಬೀಳುವ ಬಾಡಿದ ಹೂವುಗಳಂತೆಯೂ ತಂಗಾಳಿಯಿಂದ ಆಕಾಶವು ತಪೋವನದಂತೆಯೂ ಕಂಡು ರಾಜನನ್ನು ವೈರಾಗ್ಯಪರನಾಗುವಂತೆ ಮಾಡಿತ್ತು. ದೇಹದ ನಶ್ವರತೆಯನ್ನು ಕುರಿತು ಕವಿನಾಗಚಂದ್ರ ತುಂಬಾ ಸೊಗಸಾಗಿ ಕೆಳಗಿನ ಪದ್ಯದಲ್ಲಿ ಚಿತ್ರಿಸಿದ್ದಾನೆ. ತೂಗುವಿನಂ ತಲೆ ಸೆರೆಗಳ್, ಬೀಗಿ ಕೊರಲ್ ಕುಸಿವಿನಿಂ ಕಳಲ್ವಿನಗಂಪಲ್, ಬಾಗುವಿನಂಬೆನ್ ಮನುಜರ, ಮೂಗಿನ ಮೇಲಾಡುವಂ ಜವಂಪೆರ್ಕ್ಕಣಮಂ, ಯಮನು ಮನುಷ್ಯರ ತಲೆಯು ಅಲ್ಲಾಡುವಂತೆ ನರಗಳು ದುರ್ಬಲವಾಗುವಂತೆ ಬೆನ್ನು ಬಾಗುವಂತೆ ಹಲ್ಲುಗಳು ಉದುರಿ ಹೋಗುವಂತೆ ಮಾಡಿ ತನ್ನ ಬಳಿಗೆ ಕರೆದೊಯ್ಯಲು ಮೂಗಿನ ತುದಿಯಲ್ಲಿಯೇ ನಿಂತಿರುತ್ತಾನೆ. ಇಂತಹ ಅಶಾಶ್ವತವೂ ಅಸ್ಥಿರವೂ ಆದ ಈ ದೇಹದ ಮೇಲೆ ಆಶೆಯಿಟ್ಟು ಜೀವನವನ್ನು ಮರೆತು ಮನುಷ್ಯ ನರಕಕ್ಕೆ ಹೋಗುವ ಪ್ರಸಂಗವನ್ನು ನಿರೂಪಿಸಿದ್ದಾನೆ.

ನಯಸೇನ ಈತ ಜೈನ ಕವಿ ಇವನ ಗ್ರಂಥ "ಧರ್ಮಾಮೃತ" ಇದರಲ್ಲಿ ಹದಿನಾಲ್ಕು ಆಶ್ವಾಸಗಳಿವೆ.

ಧರ್ಮವನ್ನು ಬಿಡದೆ ಮೋಕ್ಷ ಮಾರ್ಗವನ್ನು ಹಿಡಿಯುತ್ತಿರುವ ಸಂಸಾರಿ ಜೀವಿಗಳಿಗೆ ಜಿನ ಧರ್ಮದ ಮಹತ್ವವನ್ನು ಮನದಟ್ಟಾಗಿ ಹೇಳುತ್ತೇನೆಂದಿದ್ದಾನೆ. ಜಿನಧರ್ಮವನ್ನು ಓದಿ ಮೋಕ್ಷವನ್ನು ಪಡೆಯಿರಿ ಎಂದು ಸಂದೇಶ ನೀಡಿದ್ದಾನೆ. ಧರ್ಮಾಮೃತದಲ್ಲಿರುವ ಹದಿನಾಲ್ಕು ಕಥೆಗಳಲ್ಲಿಯೂ ಶ್ರಾವಕ ಧರ್ಮವನ್ನು ಹೇಳುವ ಒಂದೊಂದು ಗುಣವನ್ನು ಹೇಳಿದ್ದಾನೆ. ಶ್ರಾವಕ ಧರ್ಮದಲ್ಲಿ "ಸಮ್ಯಕ್‌ದರ್ಶನ" ಕಿರಿಟ ಪ್ರಾಯವಾದದ್ದು, ಮೋಕ್ಷಕ್ಕೆ ಇದರ ಸಿದ್ಧಿಯನ್ನು ಮಾಡಿಕೊಳ್ಳಬೇಕು



Scanned by CamScanner

ಎಂದಿದ್ದಾನೆ. ಜೈನಧರ್ಮವು ವಿಶ್ವಮಾನ್ಯ ಧರ್ಮಗಳಲ್ಲಿ ಒಂದು ಬದುಕನ್ನು ಸುಂದರಗೊಳಿಸುವಲ್ಲಿ ಈ ಧರ್ಮದ ಕೊಡುಗೆಯೂ ವಿಶಿಷ್ಟವಾಗಿದೆ. ಸಾಹಿತ್ಯದ ಮುಖಾಂತರ ಇಂದಿಗೂ ಪ್ರಭಾವವನ್ನು ಬೀರುತ್ತಲೇ ಇದೆ. ಸಹಬಾಳ್ವೆಗೆ, ವ್ರತಬದ್ಧ ಜೀವನಕ್ಕೆ ತಾನು ಬೆಂಬಲವಾಗಿ ನಿಂತು ವಿಶ್ವದ ಬದುಕನ್ನು ಚೇತೋಹಾರಿಯಾಗಿಡಲು ಯಾವಾಗಲೂ ಪ್ರಯತ್ನಿಸುತ್ತಲೇ ಬಂದಿದೆ. ಅದರಲ್ಲಿಯೂ ಕರ್ನಾಟಕದಲ್ಲಿಯಂತೂ ಜೈನ ಧರ್ಮವು ಹಾಸುಹೊಕ್ಕಾಗಿ ಬೆಳೆಯಿತು. ಜೈನಧರ್ಮದ ಕವಿಗಳು ಕನ್ನಡ ಭಾಷೆಯಲ್ಲಿ ಸಾಹಿತ್ಯದ ಚಿನ್ನದ ಬೆಳೆ ಬೆಳೆದು ಭಾಷಾ ಸಾಹಿತ್ಯಗಳ ಹೆಮ್ಮೆಗೆ ಕೋಡುಮೂಡಿಸಿದ ಕಾಲವೆಂದು ಹೇಳಬೇಕು. ಕಾವ್ಯ ಧರ್ಮದ ಮೂಲಕ ಮಾನವಧರ್ಮವನ್ನು ನಾಡಿನಲ್ಲಿ ಬೆಳೆಸಲು ಪ್ರಯತ್ನಿಸಿದವು. ಜೀವ ಚೈತನ್ಯ ಸ್ವರೂಪವಾದದ್ದು, ಶಾಶ್ವತವಾದದ್ದು, ಅನಂತಜ್ಞಾನ, ಅನಂತದರ್ಶನ, ಅನಂತವೀರ್ಯ, ಅನಂತಸುಖಗಳಿಂದ ಕೂಡಿರುವುದು ಜೀವದಸ್ವಭಾವ. ಈ ಜೀವ ಆ ಜೀವದೊಡನೆ ಹೇಗೋ ಸೇರಿಕೊಂಡು ಕರ್ಮದ ಕಟ್ಟಿನಲ್ಲಿ ಸಿಕ್ಕಿಬಿದ್ದಾಗ ಈ ಅನಂತ ಜ್ಞಾನಾದಿಗಳ ಮೇಲೆ ಒಂದು ಆವರಣ ಕವಿದುಕೊಳ್ಳುತ್ತದೆ. ಆಗ ಜೀವ ತನ್ನ ಸ್ವರೂಪವನ್ನು ಮರೆತು ಚತುರ್ಗತಿ ರೂಪವಾದ ಸಂಸಾರದಲ್ಲಿ ತೊಳಲುತ್ತಿರುತ್ತದೆ. ಶುಭಾಶುಭ ಕರ್ಮಗಳನ್ನು ಮಾಡಿ ಮನುಷ್ಯನಾಗಿ ದೇವಕಿಯಾಗಿ, ತಿರ್ಯಕ್ ಪ್ರಾಣಿಯಾಗಿ, ನಾರಕಿಯಾಗಿ ಮತ್ತೆ ಮತ್ತೆ ಹುಟ್ಟುತ್ತಲೇ ಇರುತ್ತದೆ. ಹೀಗೆ ಹುಟ್ಟು ಸಾವುಗಳ ಚಕ್ರದಲ್ಲಿ ಸುತ್ತುತ್ತ ವಿದ್ಯಾಜ್ಞಾನ ಮೋಹಾದಿಗಳಿಂದ ಕರ್ಮದ ಕಟ್ಟನ್ನು ಗಟ್ಟಿಗೊಳಿಸುತ್ತ ಸಂಸಾರದಲ್ಲಿ ಸಿಕ್ಕಿ ತೊಳಲುತ್ತಿರುವಾಗ ಹಲವು ಪುಣ್ಯಕರ್ಮಗಳ ಫಲದಿಂದ ಕರ್ಮಬಂಧನದಿಂದ ಬಿಡುಗಡೆ ಹೊಂದಿ ಮುಕ್ತಾತ್ಮ ತನ್ನ ಸಹಜ ಸ್ವರೂಪವನ್ನು ಪಡೆದು ಅನಂತ ಜ್ಞಾನಗಳಿಂದ ಬೆಳಗತ್ತ ಶಾಶ್ವತವಾದ ಮೋಕ್ಷ ಸುಖದಲ್ಲಿ ನೆಲೆಗೊಳ್ಳುತ್ತದೆ.

■■

---

ಮುಖ್ಯಸ್ಥರು, ಕನ್ನಡ ವಿಭಾಗದ, ಎಸ್.ಬಿ.ಕಲಾ & ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯ, ವಿಜಯಪುರ. ಮೋ.ನಂ.೯೯೦೨೪೪೫೬೯೫



Scanned by CamScanner

ವರ್ತಮಾನದಲ್ಲಿ
ಭಕ್ತಿ ಮಾರ್ಗಗಳ ಪ್ರಸ್ತುತತೆ

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಒಂದು ಹೊಸ ದಾಖಲೆಯಾದ ಈ ಅಂತರಾಷ್ಟ್ರೀಯ ವಿಚಾರ ಸಂಕಿರಣ ಹಾಗೂ ಇಲ್ಲಿ ಮಂಡಿತವಾದ ಸಂಪ್ರಬಂಧಗಳನ್ನು ಸಂಕಲಿಸಿ ಸಂಪಾದಿಸಿದ ಗ್ರಂಥವಿದು. ಈ ಕೃತಿಯು ಓದುಗರ ಗಮನ ಸೆಳೆಯಬಹುದು ಎಂಬ ಸದಾಶಯ ನಮ್ಮದು. ಹಿರಿಯ, ಕಿರಿಯ, ಅಧ್ಯಯನಶೀಲ ಬರಹಗಾರರ ವಿಶಿಷ್ಟ ಬರವಣಿಗೆಯ ಸಂಗ್ರಹವಾಗಿದೆ. ವಿಭಿನ್ನ ಭಾವಗಳ, ಚಿಂತನೆಗಳ, ಚರ್ಚೆಗಳು, ವಿವೇಚನೆಗಳು, ಪ್ರಸ್ತುತತೆಗಳು, ಅವಿಚ್ಛಿನ್ನ ಆಯಾಮಗಳು, ಶೋಧ, ನೋಟಗಳ ಕುರಿತು ಕನ್ನಡದ ಮನಸ್ಸುಗಳ, ಕನಸುಗಳ ಕನವರಿಕೆ, ಕಲ್ಪನೆ, ಸತ್ಯಶೋಧದ ವಿಷಯ ವಿಭಿನ್ನತೆಗಳಿಂದ ಕೂಡಿದ, ಕನ್ನಡ ಸಾಹಿತ್ಯದ ಕವಲುಗಳ ಸಮಗ್ರವಾದ ಅವಲೋಕನ ಸಂಕಲನವೇ ಈ “ವರ್ತಮಾನದಲ್ಲಿ ಭಕ್ತಿ ಮಾರ್ಗಗಳ ಪ್ರಸ್ತುತತೆ” ಗ್ರಂಥವಾಗಿದೆ.

9 789383 813520

ತ್ವರಿತ ಮುದ್ರಣ, ಗದಗ

Scanned by CamScanner